ಕಾಣಿಸಿಕೊಳ್ಳುತ್ತಿತ್ತು. ಆಗ ರಾಯರು ಶುಗರ್ ಪಿಲ್ಸ್ ತೆಗೆದುಕೊಂಡರೆ ಸಾಕು. ರಾಯರ ತಲೆನೋವು ಮಾಯವಾಗುತ್ತಿತ್ತು.

ರಾಯರು ಎದ್ದು ಕುಳಿತರು. ತಾವು ಮನೆಯಿಂದ ಬರುವಾಗ ತಂದಿದ್ದ ಟೂತ್ ಬ್ರಷ್, ಟೂತ್ ಪೇಸ್ಟ್, ಶೇವಿಂಗ್ ಕ್ರೀಂ, ರೇಜರ್, ಹೇರ್ ಆಯಿಲ್, ಸೋಪುಗಳನ್ನೆಲ್ಲ ಇಡುವ ಕಿಟ್ ಅನ್ನು ಬಿಡಿಸಿ ನೋಡಿದರು. 'ಇದರಲ್ಲೇ ಆ ಶುಗರ್ ಪಿಲ್ಸ್ ಇಟ್ಟ ನೆನಪು' ಎಂದು ಹುಡುಕಾಡತೊಡಗಿದರು. ಆದರೆ ಅದು ಕಾಣಿಸದೇ ಇದ್ದಾಗ, ಛೆ! ಮತ್ತೆ ಮೈಗ್ರೇನ್ ಕಾಣಿಸಿಕೊಂಡರೆ ಹೋಮಿಯೊ ಕ್ಲಿನಿಕ್ಕನ್ನು ನಾಳೆ ಹುಡುಕಿದರಾಯಿತು' ಎಂದುಕೊಂಡು ನಿದ್ದೆ ಬರಲಿ ಎನ್ನುವಂತೆ ಕಣ್ಣು ಮುಚ್ಚಿದರು.

ರಾಯರಿಗೆ ನಿದ್ದೆ ಬರಲಿಲ್ಲ. ಆದರೆ ಬಾಲ್ಯದ ನೆನಪುಗಳು ಒಂದರ ಹಿಂದೆ ಇನ್ನೊಂದು ಓಡೋಡಿ ಬರತೊಡಗಿದವು.

ರಾಯರಿಗೆ ಬುದ್ಧಿ ತಿಳಿದಾಗ ಅವರ ಅಮ್ಮ ಸೌಮ್ಯ ಮನೆವಾರ್ತೆ ಬಿಟ್ಟು ಹೊರಗೆಲ್ಲೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಒಮ್ಮೊಮ್ಮೆ ರಾಯರನ್ನು ತನ್ನನ್ನು ಸೊಂಟದಲ್ಲಿಟ್ಟುಕೊಂಡು, ಆಮೇಲೆ ತಾನು ಸರಿಯಾಗಿ ನಡೆದಾಡಲು ಸಾಧ್ಯವಾದ ಮೇಲೆ ತನ್ನ ಕೈಯನ್ನು ಹಿಡಿದುಕೊಂಡು ರಾಯರ ಅಮ್ಮ ಗೋವಿಂದ ಭಟ್ಟರ ಮನೆಗೆ ಕರೆದೊಯ್ಯುತ್ತಿದ್ದುದು ರಾಯರಿಗೆ ನೆನಪುಂಟು. ಗೋವಿಂದ ಭಟ್ಟರು ರಾಯರನ್ನು ನೋಡಿದಾಕ್ಷಣ 'ಹೇಗಿದ್ದಿಯೋ ಶ್ರೀನಿವಾಸ?' ಎಂದು ರಾಯರನ್ನು ತೊಡೆಯಲ್ಲಿಟ್ಟುಕೊಂಡು ಮುದ್ದಿಸುವುದಿತ್ತು. ಆ ಹೊತ್ತಿನಲ್ಲಿ ಶಂಕರಿ ಅಮ್ಮನೂ ಅಷ್ಟೇ ಖುಷಿಯಿಂದ ಕೈ ತುಂಬ ತಿಂಡಿಕೊಟ್ಟು, 'ತಿನ್ನು ತಿನ್ನು' ಎಂದು ಎರಡು ಮೂರು ಬಾರಿ ಹೇಳಿ, 'ಇದೂ ಇರಲಿ, ಮನೆಯಲ್ಲಿ ಆಮೇಲೆ ತಿನ್ನಲಿಕ್ಕಾಯಿತು' ಎಂದು ಅದೇ ತಿಂಡಿ ತೀರ್ಥವನ್ನು ಪುಟ್ಟ ಪಾತ್ರೆಯಲ್ಲಿ ತುಂಬಿ ತನ್ನ ಅಮ್ಮನ ಕೈಯಲ್ಲಿಡುತ್ತಿದ್ದುದನ್ನು ರಾಯರು ಇನ್ನೂ ಮರೆತಿದ್ದಿಲ್ಲ.

ರಾಯರಿಗೆ ಐದು ವರುಷ ತುಂಬಿದ ಸುಮಾರಿಗೆ ಒಂದು ಬೆಳ್ಳಂಬೆಳಗ್ಗೆ ರಾಯರನ್ನು ಸೌಮ್ಯಳ ಜೊತೆ ಕರೆಸಿಕೊಂಡ ಗೋವಿಂದಭಟ್ಟರು ಮನೆ ದೇವರ ಪೂಜೆ ಮುಗಿಸಿ, ದೇವರ ಇದಿರು ಮಗನನ್ನು ತನ್ನ ತೊಡೆಯ ಮೇಲೆ ಕೂಡಿಸಿ ಅಕ್ಷರಾಭ್ಯಾಸ ಮಾಡಿಸಿದ್ದರು. ಆ ದಿನ ಶಂಕರಿ ಅಮ್ಮ ಗೋವಿಂದಭಟ್ಟರಿಗೆ ಪ್ರಿಯವಾದ 'ಪೇರಡ್ಯೆ' (ಹಾಲು ಹಿಟ್ಟು) ಪಾಯಸವನ್ನು ಮಾಡಿ, ತಾಯಿಮಕ್ಕಳಿಬ್ಬರಿಗೂ ಬಡಿಸಿದ್ದರು. ಮಧ್ಯಾಹ್ನದ ಊಟ ತೀರಿಸಿ ಮನೆಯ ಮಾಡಿನ ನೆರಳು ಭಟ್ಟರ ಮನೆಯ ತುಳಸಿಕಟ್ಟೆಗೆ ಬೀಳುವ ಹೊತ್ತು ಸೌಮ್ಯ, ಗೋವಿಂದ ಭಟ್ಟರ ಮತ್ತು ಶಂಕರಿ ಅಮ್ಮನ ಪಾದಮುಟ್ಟಿ ನಮಸ್ಕರಿಸುವಂತೆ ಮಗನಿಗೆ ಹೇಳಿ, ತಾನೂ ಅವರಿಬ್ಬರಿಗೂ ನಮಸ್ಕರಿಸಿ ಸಂತೋಷದಲ್ಲಿ ಕಣ್ಣು ತುಂಬಿಸಿಕೊಂಡು ಮನೆಗೆ ಮರಳಿದ್ದಳು.

ರಾಯರು ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಣಪನಹಿತ್ತಿಲು ಗ್ರಾಮದಲ್ಲಿ ವೆಂಕಟ್ರಾಯ ಮಾಷ್ಟ್ರು ಸ್ಥಾಪಿಸಿದ್ದ ಗುರುಕುಲ ಮಾದರಿಯ ಶಾಲೆಯಲ್ಲಿ ಮುಗಿಸಿದ್ದರು. ಆಮೇಲೆ ಗೋವಿಂದಭಟ್ಟರು ಈ ಮಗುವನ್ನು ಎಲ್ಲಿ ಓದಿಸುವುದು ಎಂದು ಯೋಚಿಸುತ್ತಿರುವಾಗ ವೆಂಕಟ್ರಾಯ ಮಾಷ್ಟ್ರೇ ಒಂದು ಸಂಜೆ ಭಟ್ಟರ ಎದುರು ಹಾಜರಾಗಿ, 'ಸ್ವಾಮಿ ನೀವು ಒಂದು ಬಡಕುಟುಂಬವನ್ನು ಉದ್ಧರಿಸಿ ಪುಣ್ಯ ಕಟ್ಟಿಕೊಂಡಿರಿ. ಇನ್ನು ಅವನಿಗೆ ವಿದ್ಯಾಭ್ಯಾಸ ನೀಡಿ ಹರಸಿ' ಎಂದು ವಿನಂತಿಸಿ, 'ನೀವು ಅವನನ್ನು ಆಶೀರ್ವಾದ ಹೈಸ್ಕೂಲಿಗೆ ಹೋಗುವ ನನ್ನ ಮಗನ ಜೊತೆ ಕಳುಹಿಸಿ' ಎಂಬ ಸಲಹೆಯನ್ನು ಮುಂದಿಟ್ಟಿದ್ದರು.

ಗೋವಿಂದ ಭಟ್ಟರಿಗೆ ಖುಷಿಯಾಯಿತು. ಅವರು ಅದನ್ನು ಒಪ್ಪಿಕೊಂಡರು. ರಾಯರನ್ನು ಆಶೀರ್ವಾದ ಹೈಸ್ಕೂಲಿಗೆ ಸೇರಿಸಿದರು. ರಾಯರು ಶಿರ್ವದ ಸೈಂಟ್ ಮೇರಿ ಹೈಸ್ಕೂಲಿನಲ್ಲಿ ಓದಿ ಪ್ರಥಮ ದರ್ಜೆಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆದರೆ ಮಗನು ಮ್ಯಾಟ್ರಿಕ್ ಪಾಸಾದ ವಾರ್ತೆಯ ಸಂಭ್ರಮವನ್ನು, ಗೋವಿಂದ ಭಟ್ಟರಿಗೆ ಹೇಳಲು ಸೌಮ್ಯ ಬಂದಾಗ, ಭಟ್ಟರು ಹಾಸಿಗೆ ಹಿಡಿದು ಮಲಗಿದ್ದರು. ಆಗಾಗ ಕಾಣಿಸಿಕೊಳ್ಳುತ್ತಿದ್ದ ಬೆನ್ನುನೋವು ಅವರನ್ನು ಆ ಎರಡು ದಿನದಿಂದ ವಿಶೇಷವಾಗಿ ಬಾಧಿಸುತ್ತಿತ್ತು. ಅವರು ಕಷ್ಟದಲ್ಲೇ ಎದ್ದು ಕುಳಿತು ಇದಿರಿಗೆ ಇದ್ದ ಮಗ ಶ್ರೀನಿವಾಸನನ್ನು ಹತ್ತಿರ ಕರೆದು ತಲೆ ನೇವರಿಸಿ 'ಎರಡು ದಿನದಲ್ಲಿ ನಾನು ಹುಶಾರಾದೇನು, ಆಮೇಲೆ ಉಡುಪಿಗೆ ಹೋಗೋಣ. ಅಲ್ಲಿ ಹೊಸತಾಗಿ ಒಂದು ಕಾಲೇಜು ಪ್ರಾರಂಭವಾಗಿದೆ ಎಂದು ಕೇಳಿದ್ದೇನೆ. ಉಡುಪಿ ಮಠದಲ್ಲಿ ಇದ್ದುಕೊಂಡು ಉಚಿತ ಅನ್ನ, ವಸತಿ ಪಡೆದು ನೀನು ಅಲ್ಲಿ ಓದಬಹುದು' ಎಂಬ ಸಲಹೆಯನ್ನು ನೀಡಿದರು.

ಅಷ್ಟರಲ್ಲಿ ಶಂಕರಿ ಅಮ್ಮ 'ಅವನನ್ನು ನೀವು ಓದಿಸುವುದು ಸಂತೋಷವೇ. ಆದರೆ ಅವನು ನಿಮಗೆ ಹುಟ್ಟಿದ್ದರಿಂದ ನೀವು ಅವನಿಗೆ ಒಂದು ಜನಿವಾರ ಹಾಕಬೇಕಾಗಿರುವುದು ಕರ್ತವ್ಯವಲ್ಲವೇ?' ಎಂಬ ಪ್ರಶ್ನೆ ಮುಂದಿಟ್ಟರು.

ಗೋವಿಂದ ಭಟ್ಟರಿಗೆ ಹೌದೆನಿಸಿತು. ಇಡೀ ಊರು ಈಗ ಶ್ರೀನಿವಾಸನನ್ನು ತಾನು ಇರಿಸಿಕೊಂಡವಳಲ್ಲಿ ಹುಟ್ಟಿದವನು ಎಂದು ಒಪ್ಪಿಕೊಂಡಿದೆ ಎನ್ನುವುದು ಭಟ್ಟರಿಗೆ ಗೊತ್ತಿತ್ತು. ಆದರೆ ಅಧಿಕೃತವಾಗಿ ತಾನು ಬ್ರಾಹ್ಮಣರನ್ನೆಲ್ಲ ಕರೆದು ಈ ಹುಡುಗನಿಗೆ ಉಪನಯನ ಮಾಡುತ್ತೇನೆಂದರೆ ಯಾರು ಮುಂದೆ ಬಂದಾರು? ಎಂದುಕೊಂಡ ಅವರು, 'ನಿನ್ನ ಸಲಹೆ ಸಹಜವಾದದ್ದು ಶಂಕರಿ. ಆದರೆ ಮನೆಯಲ್ಲಿ ಹೇಗೆ ಉಪನಯನ ಮಾಡುವುದು ಹೇಳು? ಅಂತೂ ಇಂತೂ ಉಪನಯನ ಮಾಡಿದರೂ ಈ ಊರಿನ ಬ್ರಾಹ್ಮಣರು ಆ ಸಮಾರಂಭಕ್ಕೆ ಬರುತ್ತಾರಾ?' ಎಂದು ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿದರು. ಆಮೇಲೆ 'ಹದಿನಾರು ವರುಷದ ಹುಡುಗನಲ್ಲಿ ಜನಿವಾರ ಇಲ್ಲ ಅಂದರೆ ಉಡುಪಿ ಮಠದಲ್ಲಿ ಊಟ ವಸತಿ ಸಿಗದು' ಎಂದು ತರ್ಕಿಸಿದ ಅವರು, 'ಎಲ್ಲಿ ಇವನಿಗೆ ಉಪನಯನ ಮಾಡುವುದು?' ಎಂದು ಯೋಚಿಸತೊಡಗಿದರು. ಆಗ ಅವರಿಗೆ ಏನೋ ಹೊಳೆದಂತಾಗಿ ಅವರು ಹೆಂಡತಿಯಲ್ಲಿ 'ನನ್ನ ಜೊತೆ ಅಭ್ಯಾಸ ನಡೆಸಿದ ರಾಮಚಂದ್ರ ಆಚಾರ್ಯರು ಮಂಜೇಶ್ವರ ಕಣ್ವತೀರ್ಥ ಮಠದಲ್ಲಿ ಪಾರುಪತ್ಯಗಾರರಾಗಿದ್ದಾರೆ ನೋಡು. ಅವರನ್ನು ಒಪ್ಪಿಸಿ ನಾಲ್ಕು ಜನರನ್ನು ಅಲ್ಲಿಗೇ ಕರೆಸಿ ಇವನಿಗೆ ಉಪನಯನ ಮಾಡಬಹುದು' ಎಂಬ ಅಭಿಪ್ರಾಯವನ್ನು ಮುಂದಿಟ್ಟರು.

ಎಂಟು ದಿನದ ಮೇಲೆ ಬೆನ್ನು ನೋವು ಕಡಿಮೆ ಇದೆ ಎಂದುಕೊಂಡ ಗೋವಿಂದ ಭಟ್ಟರು ಶಿರ್ವದಿಂದ ಬೆಳ್ಮಣ್ಣಿಗೆ ಬಂದು ಅಲ್ಲಿಂದ ಮಂಗಳೂರಿಗೆ ಹೋಗಿ, ಮಂಗಳೂರಿನಿಂದ ರೈಲು ಹತ್ತಿ ಮಂಜೇಶ್ವರದ ಕಣ್ವತೀರ್ಥಮಠಕ್ಕೆ ಬಂದಿಳಿದರು. ಆಗ ಸೂರ್ಯ ಅಸ್ತಮಿಸುವ ಹೊತ್ತಾಗಿತ್ತು. ಭಟ್ಟರು 'ಆಚಾರ್ರೇ ಆಚಾರ್ರೇ' ಎಂದು ಮಠದ ಒಳಗೆ ಕಾಲಿಟ್ಟು ಕೂಗಿದಾಗ ಮಠದ ಬಾಗಿಲಿಗೆ ಧಾವಿಸಿ ಬಂದ ರಾಮಚಂದ್ರ ಆಚಾರ್ಯರು ಮುಗುಳ್ನಕ್ಕು 'ಇವರು ಯಾರು? ಎಲ್ಲೋ ನೋಡಿದ ಹಾಗಿದೆಯಲ್ಲ!' ಎಂದುಕೊಳ್ಳುತ್ತಿರುವಾಗ ಭಟ್ಟರೇ, 'ಆಚಾರ್ರೇ ನಮಸ್ಕಾರ' ಎಂದು ಎರಡೂ ಕೈ ಜೋಡಿಸಿದರು. ಆಚಾರ್ಯರು ಮುಗುಳ್ನಕ್ಕು 'ತಾವು ಯಾರು?' ಎಂದು ಮತ್ತೆ ಪ್ರಶ್ನಿಸಿ ಪ್ರತಿ ನಮಸ್ಕರಿಸಿದರು. ಆಚಾರ್ಯರಿಗೆ ತನ್ನ ಪರಿಚಯ ಆಗದ್ದನ್ನು ಗಮನಿಸಿದ ಗೋವಿಂದ ಭಟ್ಟರು, 'ನಾನು ಗೋವಿಂದ ಭಟ್ಟ, ಕಣಪನಹಿತ್ಲು ಗ್ರಾಮದಿಂದ ಬಂದಿದ್ದೇನೆ' ಎಂದು ತಮ್ಮ ಪರಿಚಯ ಹೇಳಿದರು.

ಆಚಾರ್ಯರಿಗೆ ತಕ್ಷಣ ಹಿಂದಿನದ್ದೆಲ್ಲ ನೆನಪಿಗೆ ಬಂತು. ಅವರು 'ಓಹೋಹೋ ಗೊತ್ತಾಯ್ತು, ಗೋವಿಂದನಲ್ಲವೇ? ಹೌದೌದು! ನಾವು ಒಟ್ಟಿಗೇ ಓದಿದವರು!' ಎಂದು ಸಂತೋಷದಿಂದ ಉಬ್ಬಿಹೋದರು. ಮಠದ ಒಳಗಿರುವ ತಮ್ಮ ಬಿಡಾರಕ್ಕೆ ಭಟ್ಟರನ್ನು ಕರೆದೊಯ್ದು ಹೆಂಡತಿಗೆ ಭಟ್ಟರನ್ನು ಪರಿಚಯಿಸಿದರು. 'ದಾಕ್ಷಿಣ್ಯ ಬೇಡ. ಕುಡಿಯಲಿಕ್ಕೆ ಏನು ಬೇಕು ಹೇಳಿ?' ಎಂದು ಭಟ್ಟರನ್ನು ಉಪಚರಿಸಲು ಮುಂದಾದರು.

'ಬರೇ ಬೆಲ್ಲ ನೀರು ಸಾಕು ಆಚಾರ್ರೇ, ಈ ಹೊತ್ತಿನಲಿ ಸುಸ್ತಾದರೆ ಅದನ್ನೇ ಕುಡಿಯುವುದು' ಎಂದು ಹೇಳಿದ ಭಟ್ಟರು, 'ಸಾಕೋ ಸಾಕಾಯ್ತು ಮಾರಾಯರೇ ನಿಮ್ಮಲ್ಲಿಗೆ ಬರಲು! ಬರೋಬ್ಬರಿ ಹನ್ನೆರಡು ತಾಸು ಬೇಕಾಯ್ತು ನೋಡಿ' ಎಂದು ಲೋಕಾಭಿರಾಮವಾದ ಮಾತಿಗೆ ಇಳಿದರು.

ರಾತ್ರೆ ಊಟ ಮುಗಿಸಿದ ಮೇಲೆ ಭಟ್ಟರು ಆಚಾರ್ಯರನ್ನು ಮಠದ ಒಳ ಅಂಗಳಕ್ಕೆ ಕರಕೊಂಡು ಹೋಗಿ 'ನಿಮ್ಮಿಂದ ಒಂದು ಉಪಕಾರ ಆಗಬೇಕಾಗಿದೆ' ಎನ್ನುತ್ತಾ 'ತನಗೆ ಮಾಲೇರ ಹೆಣ್ಣಿನಲ್ಲಿ ಹುಟ್ಟಿದ ಒಬ್ಬ ಹುಡುಗನಿಗೆ ಉಪನಯನ ಸಂಸ್ಕಾರ ಮಾಡಬೇಕಾಗಿದೆ' ಎಂದರು.

'ಊರಲ್ಲಿ ಅವನಿಗೆ ಉಪನಯನ ಮಾಡುವ ಹಾಗಿಲ್ಲ. ಹಾಗೆಂದು ಅವನಿಗೆ ಉಪನಯನ ಮಾಡದೆ ನಿರ್ವಾಹ ಇಲ್ಲ' ಎನ್ನುವುದನ್ನೆಲ್ಲ ವಿವರಿಸಿ, 'ಇಲ್ಲಿ ನೀವು ಯಾವ ಮುಜುಗರವೂ ಇಲ್ಲದೆ ಉಪನಯನ ಮಾಡಬಹುದೇನೋ ಎಂದು ನನ್ನ ಅಂಬೋಣ. ನೀವು ಒಬ್ಬ ಪುರೋಹಿತರನ್ನು ಕರೆಸಿ ಜನಿವಾರ ಹಾಕಿದರೆ ಸಾಕು' ಎಂದೂ ವಿನಂತಿಸಿದರು.

ಆಚಾರ್ಯರು ನಿಟ್ಟುಸಿರು ಬಿಟ್ಟರು.